**ಅ.ದಾವಾ 199 /2023** **ಪಿ.ಡಬ್ಲ್ಯೂ- 1**

**ದಿನಾಂಕಃ 24/06/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀಮತಿ ಜಿ.ಎಸ್. ವಕೀಲರಿಂದ**

ನಾನು ಪ್ರಸ್ತುತ ಯಾವುದೇ ಕೆಲಸ ಮಾಡುತ್ತಿಲ್ಲ. ಸದರಿ ದಾವೆಯನ್ನು ನಾನು ರಾಮದಾಸಯ್ಯ ಹಾಗೂ ಅವರ ಪತ್ನಿಯ ಮೇಲೆ ಹೂಡಿರುತ್ತೇನೆ. ನನ್ನ ತಾಯಿ ಲಕ್ಕಮ್ಮರವರಿಗೆ ಮೊದಲನೇಯವರು ಕಾಳಮ್ಮ, ಎರಡನೇಯ ಗೌರಮ್ಮ, ಮೂರನೇ ನಾನು ಅಂದರೆ ಹೆಚ್.ಕೆ.ದೇವರಾಜು, ನಾಲ್ಕನೇಯ ನನ್ನ ತಮ್ಮನಾದ ಹೆಚ್.ಕೆ.ರಂಗಯ್ಯ ಇವರುಗಳು ಒಟ್ಟು 4 ಜನ ಮಕ್ಕಳು. ನನ್ನ ತಾಯಿಗೆ ಬಚ್ಚಮ್ಮ ಎಂದು ಕೂಡ ಅಡ್ಡ ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿ. ಕಾಳಮ್ಮ ಹಾಗೂ ಗೌರಮ್ಮರವರುಗಳಿಗೆ ಈಗಾಗಲೇ ಮದುವೆಯಾಗಿರುತ್ತದೆ ಎಂದರೆ ಸರಿ. ಇವರಿಗೆ ಮದುವೆಯಾಗಿ ಸುಮಾರು 40 ವರ್ಷಗಳು ಆಯಿತು. ನನ್ನ ಮದುವೆಯಾಗಿ ಸುಮಾರು 39 ವರ್ಷಗಳು ಆಗಿರುತ್ತದೆ. 2ನೇ ವಾದಿಗೆ ಮದುವೆಯಾಗಿ 35 ವರ್ಷಗಳು ಆಗಿರುತ್ತದೆ.

ದಾವೆಯಲ್ಲಿ ಬರೆಸಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. 1ನೇ ಪ್ರತಿವಾದಿಯ ತಂದೆಯ ಹೆಸರು ಕಾಳಯ್ಯ ಉರುಫ್ ವಡ್ಡಯ್ಯ. 1ನೇ ಪ್ರತಿವಾದಿಯ ತಾಯಿ ಹೆಸರು ದ್ಯಾವಮ್ಮ ಎಂದರೆ ಸರಿ. 1ನೇ ಪ್ರತಿವಾದಿಯ ಹೆಂಡತಿಯ ಹೆಸರು ಪುಟ್ಟಗೌರಮ್ಮ ಎಂದರೆ ಸರಿ. ಕಾಳಯ್ಯ ಉರುಫ್ ವಡ್ಡಯ್ಯ ಹಾಗೂ ದ್ಯಾವಮ್ಮರವರಿಗೆ ರಾಮದಾಸಯ್ಯ ಒಬ್ಬನೇ ಮಗ ಎಂದರೆ ಸರಿ. 1ನೇ ಪ್ರತಿವಾದಿಗೆ ಮೊದಲನೇ ಹೇಮಾ, ಎರಡನೇ ರೇವತಿ, ಮೂರನೇ ಭಾರತಿ, ನಾಲ್ಕನೇ ಪುಣ್ಯವತಿ, ಐದನೇ ಹೊನ್ನಮ್ಮ, ಆರನೇ ಮಹೇಶ ಇವರುಗಳು ಮಕ್ಕಳು. 1ನೇ ಪ್ರತಿವಾದಿ ಹಾಗೂ 2ನೇ ಪ್ರತಿವಾದಿಗೆ ಮಹೇಶ ಎನ್ನುವ ಒಬ್ಬನೇ ಮಗ ಎಂದರೆ ಸರಿ. 1ನೇ ಪ್ರತಿವಾದಿಯ ತಂದೆ 1975 ರಲ್ಲಿ ಮರಣಹೊಂದಿರುತ್ತಾರೆ. ನನ್ನ ತಾಯಿಯಾದ ಲಕ್ಕಮ್ಮ ಉರುಫ್ ಬಚ್ಚಮ್ಮ ರವರು 2010 ರಲ್ಲಿ ಮರಣಹೊಂದಿರುತ್ತಾರೆ. 1ನೇ ಪ್ರತಿವಾದಿಯ ತಾಯಿ ದ್ಯಾವಮ್ಮ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯಾದ ಲಕ್ಕಮ್ಮ ಉರುಫ್ ಬಚ್ಚಮ್ಮ ರವರ ತಂದೆಯ ಹೆಸರು ಚಿಕ್ಕರಂಗಯ್ಯ.

**(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು)**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KAHS710009732023/truecopy/order-3.pdf